ಈ) ಅಂತರರಾಷ್ಟ್ರೀಯ ಪುಷ್ಪ ಹರಾಜು ಕೇಂದ್ರದ ಕಟ್ಟಡದ ಕಾರ್ಯವು ಪೂರ್ಣಗೊಂಡಿರುತ್ತದೆ. ಡಿಜಿಟಲ್ ಗಡಿಯಾರವನ್ನು ಅಳವಡಿಸಿ ಸದ್ಯದಲ್ಲಿಯೇ ಕೇಂದ್ರವನ್ನು ರೈತರ ಉಪಯೋಗಕ್ಕೆ ತೆರೆಯಲಾಗುವುದು.

689 (476) ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ (ಬೆಳ್ಳಾವಿ) – ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಬ್ಬಿ ತಾಲ್ಲೂಕು ಚೇಳೂರು ಹೋಬಳಿಯ ಚೇಳೂರು ಗ್ರಾಮದಲ್ಲಿರುವ ಕೃಷಿ ಉತ್ಪನ್ನ ಸಮಿತಿಯ ಉಪ ಮಾರುಕಟ್ಟೆ ಆವರಣವನ್ನು ರೈತರ ಅನುಕೂಲಕ್ಕಾಗಿ ಅಭಿವೃದ್ಧಿಪಡಿಸಲು ಸರ್ಕಾರದ ಕ್ರಮಗಳೇನು ;

ಆ) ಹಾಗಿದ್ದಲ್ಲಿ, ಯಾವಾಗ ಉಪ ಮಾರುಕಟ್ಟೆ ಪ್ರಾಂಗಣ ಪ್ರಾರಂಭವಾಗಬಹುದು ; (ವಿವರ ನೀಡುವುದು) ?

ಶ್ರೀ ಶರಣಬಸಪ್ಪ ದರ್ಶನಾಪುರ (ಕೃಷಿ ಮಾರುಕಟ್ಟೆ ಸಚಿವರು) :

ಅ) ಚೇಳೂರು ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಆಡಳಿತ ಕಛೇರಿ, ಕಿರುನೀರು ಸರಬರಾಜು ವ್ಯವಸ್ಥೆ, ಬೋರ್‌ವೆಲ್‌ನಿಂದ ನೀರು ಪೂರೈಸಲು ವಿದ್ಯುತ್ ಸರಬರಾಜು ಮತ್ತು ಪ್ರಾಂಗಣದ ಸುತ್ತ 3 ಕಡೆ ತಂತಿಬೇಲಿ ಹಾಗೂ ಮುಂಭಾಗದಲ್ಲಿ ಕಾಂಪೌಂಡ್ ಗೋಡೆ ನಿರ್ಮಾಣ ಮಾಡುವ ಕಾಮಗಾರಿಗಳನ್ನು ರೂ.16,00,743.00ಗಳ ವೆಚ್ಚದಲ್ಲಿ ಕೈಗೊಳ್ಳಲಾಗಿದೆ. ಉಪ ಮಾರುಕಟ್ಟೆ ಪ್ರಾಂಗಣದ ಅಭಿವೃದ್ಧಿಗಾಗಿ ರೂ.75.00 ಲಕ್ಷಗಳ ಸಾಲವನ್ನು ಎಪಿಎಂಸಿ ಗುಬ್ಬಿಗೆ ನೀಡುವಂತೆ ತುಮಕೂರು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ತಿಳಿಸಲಾಗಿದೆ.

ಆ) ಮೂಲಭೂತ ಸೌಕರ್ಯಗಳನ್ನು ಒದಗಿಸಿ, ಅಭಿವೃದ್ಧಿಪಡಿಸಿದ ಕೂಡಲೇ ವಹಿವಾಟು ಪ್ರಾರಂಭಿಸಲಾಗುವುದು.

690 (478) ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ (ಬೆಳ್ಳಾವಿ) – ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮತ್ಸ್ಯಾಶ್ರಯ ಯೋಜನೆಯಡಿಯಲ್ಲಿ ಮೀನುಗಾರರಿಗೆ ವಸತಿ ನೀಡುವ ಯೋಜನೆಯನ್ನು ತುಮಕೂರು ಜಿಲ್ಲೆಯಲ್ಲಿ ಜಾರಿಗೊಳಿಸಲಾಗಿದೆಯೆ ;

ಆ) ವಸತಿಯ ಯೋಜನೆಯನ್ನು ಜಾರಿಗೊಳಿಸಿದಲ್ಲಿ ಇದುವರೆವಿಗೂ ಎಷ್ಟು ವಸತಿ ಹೀನರಿಗೆ ವಸತಿ ನೀಡಲಾಗಿದೆ ; (ತುಮಕೂರು ಜಿಲ್ಲೆಯ ತಾಲ್ಲೂಕುವಾರು ವಿವರ ನೀಡುವುದು) ;

ಇ) ತುಮಕೂರು ಜಿಲ್ಲೆಗೆ ಮತ್ಸ್ಯಾಶ್ರಯ ಯೋಜನೆಯನ್ನು ಜಾರಿಗೊಳಿಸದಿದ್ದಲ್ಲಿ ಯಾವಾಗ ಜಾರಿಗೊಳಿಸಲಾಗುವುದು ;

ಈ) ಇದಕ್ಕೆ ಕಾಲಮಿತಿಯನ್ನೇನಾದರೂ ನಿಗದಿಪಡಿಸಲಾಗಿದೆಯೇ ; (ವಿವರ ನೀಡುವುದು) ?

ಶ್ರೀ ಬಿ.ನಾಗರಾಜಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು): ಅ) ಹೌದು.

ಆ) ಈ ಯೋಜನೆಯಡಿ ಇದುವರೆವಿಗೂ 520 ವಸತಿ ರಹಿತ ಮೀನುಗಾರರಿಗೆ ವಸತಿ ಸೌಲಭ್ಯ ಕಲ್ಪಿಸಲಾಗಿದೆ. ತುಮಕೂರು ಜಿಲ್ಲೆಯ ತಾಲ್ಲೂಕು/ಕ್ಷೇತ್ರವಾರು ವಿವರವನ್ನು ಕೆಳಗೆ ನೀಡಲಾಗಿದೆ.

1. ಚಿಕ್ಕನಾಯಕನಹಳ್ಳಿ	55
2. ಗುಬ್ಬಿ	110
3. ಕೊರಟಗೆರೆ	30
4. ಕುಣಿಗಲ್	65
5. ಮಧುಗಿರಿ	10
6. ಸಿರಾ	55
7. ತಿಪಟೂರು	90
8. ತುಮಕೂರು	10
9. ತುರುವೇಕೆರೆ	75
10. ಕಳ್ಳಂಬೆಳ್ಳ	10
11. ಬೆಳ್ಳಾವಿ	10
ಒಟ್ಟು	520

ಇ) ಪ್ರಶ್ನೆ ಉದ್ಭವಿಸುವುದಿಲ್ಲ.